ಗ್ರಾಮಗಳು	ಜಮೀನಿನ ವಿಸ್ತೀರ್ಣ
	ಮಾ—ಗು—ಅಡಿ
೧) ಕುಪ್ಪೆಲೂರು	೧೩—೧೨—೧೦೭
೨) ಗೋಡಿಹಾಳ	೦೩—೨೨—೦೦೫
೩) ಯಲಬುಡಗಿ	೦೩—೨೭—೧೧೨
ಒಟ್ಟು	೨೪—೨೨—೦೦೫

ಮೇಲ್ಕಂಡ ಜಮೀನುಗಳಿಗೆ ಪ್ರತಿ ಎಕರೆಗೆ ಸುಮಾರು ೨,೫೦೦-೦೦ ರೂಪಾಯಿಗಳಂತೆ ೬೦,೦೫೭-೭೧ ರೂಪಾಯಿಗಳಿಗೆ, ದಿನಾಂಕ ೧೭-೧೨-೧೯೬೦ ರಂದು ಜಪ್ತೀರ್ಪನ್ನು ಆನಂದೋರಿಸಲ್ಪಟ್ಟಿದ್ದು, ಈ ಪೈಕಿ ದಿನಾಂಕ ೧೭-೧೨-೧೯೬೦ ರಂದು ಹಾಗೂ ೨೧-೬-೧೯೬೧ ರಂದು ಕ್ರಮವಾಗಿ ೪೫,೯೪-೭೨ ರೂಪಾಯಿಗಳನ್ನೂ ಹಾಗೂ ೫,೫೫೬-೪೯ ರೂಪಾಯಿಗಳನ್ನು ಭೂಮಾಲೀಕರಿಗೆ ಪರಿಹಾರ ಧನವನ್ನಾಗಿ ಪಾವತಿ ಮಾಡಲಾಗಿದೆ. ಮೇಲ್ಕಂಡ ಗ್ರಾಮಗಳ ಒಟ್ಟು ೩೭ ಜನರು ಜಮೀನನ್ನು ಕಳೆದುಕೊಂಡಿರುತ್ತಾರೆ. ಮೇಲೆ ಹೇಳಿರುವ ಸಾಮಾಯ ಮಾಡಿದ ಪರಿಹಾರ ಧನಕ್ಕೆ ಸಮಾಧಾನ ಹೊಂದದೆ ಕೆಲವು ಭೂಮಾಲೀಕರುಗಳು ಭೂಸ್ವಾಧೀನ ಕಾಯ್ದೆ ಕಲಂ ೧೮ರನ್ವಯ ಹೆಚ್ಚಿನ ಪರಿಹಾರಕ್ಕಾಗಿ ರಾಣೆಬೆನ್ನೂರಿನ ಸಿವಿಲ್ ನ್ಯಾಯಾಲಯದಲ್ಲಿ ಎಲ್‌ಎಸಿ ಸಂಖ್ಯೆ ೧೪:೮೧, ೧೫:೮೧, ೪೬:೮೧, ೪೭:೮೧,೪೮:೮೧, ೫೦:೮೧, ೫೧ ೮೧, ೫೨:೮೧, ೫೫:೮೧ ಮತ್ತು ೫೮:೮೧ರಲ್ಲಿ ಅಜಿಯು ಸಲ್ಲಿಸಿದ್ದರು, ಮೇಲ್ಕಂಡ ಎಲ್‌ಎಸಿ ಸಂಖ್ಯೆಗಳ ಬಗ್ಗೆ ನ್ಯಾಯಾಲಯವು ದಿನಾಂಕ ೧೯-೧೨-೧೯೬೫ರಂದು ನೀಡಿರುವ ಆದೇಶದಲ್ಲಿ ಪ್ರತಿ ಎಕರೆಗೆ ೬,೮೦೦-೦೦ ರೂಪಾಯಿಗಳ ಪರಿಹಾರ ಧನವನ್ನು ನಿಗದಿಮಾಡಿತ್ತು. ಸದರಿ ಡಿಕ್ರಿ ಮೊಕದ್ದೆಗೆ ೪,೧೧,೯೭೬-೦೪ ರೂಪಾಯಿಗಳನ್ನು ನ್ಯಾಯಾಲಯದಲ್ಲಿ ಜಮಾ ಮಾಡಿದ್ದು, ಅಪೀಲುದಾರರು ನ್ಯಾಯಾಲಯದಲ್ಲಿ ಈಗಾಗಲೇ ಪರಿಹಾರ ಧನವನ್ನು ಪಡೆದಿರುತ್ತಾರೆ. ನ್ಯಾಯಾಲಯದಿಂದ ತಿಳುವಳಿಕೆ ಬಂದ ಕೂಡಲೇ ಡಿಕ್ರಿ ಹಣವನ್ನು ಸಂದಾಯ ಮಾಡಲಾಗಿದೆ. ಡಿಕ್ರಿ ಹಣವನ್ನು ಸಂದಾಯ ಮಾಡುವಲ್ಲಿ ಯಾವುದೇ ವಿಳಂಬ ಮಾಡಿರುವುದಿಲ್ಲ. ಮಿಸ್‌ಲೇನಿಯಸ್ ಆಫೀಲುಗಳ ಸಂಖ್ಯೆ ೪೯ ರಿಂದ ೫೧ ಮತ್ತು ೫೩ ರಿಂದ ೫೫:೮೧ರ ಪ್ರಕರಣಗಳಲ್ಲಿ ಸದ ಲಿಟ್ಲ್,೮೭೮-೬೩ ರೂಪಾಯಿಗಳ ಡಿಕ್ರಿ ಹಣವನ್ನು ರಾಣೆಬೆನ್ನೂರಿನ ಸಿವಿಲ್ ನ್ಯಾಯಾಲಯದಲ್ಲಿ ಜಮಾ ಮಾಡಲಾಗಿದೆ. ನ್ಯಾಯಾಲಯದಿಂದ ತೀರ್ಪು ಬಂದ ಕೂಡಲೇ ಪರಿಹಾರ ಧನವನ್ನು ಸಂದಾಯ ಮಾಡಲಾಗುತ್ತದೆ.

(೩) ಮೈಸೂರಿನ ಕೆ.ಆರ್. ಮಿಲ್ ಮುಚ್ಚಿರುವುದನ್ನು ತೆರೆಯುವ ಬಗ್ಗೆ

ಶ್ರೀ ಎಂ.ಎಸ್. ಕೃಷ್ಣನ್ಸ್.—ಮಾನ್ಯ ಅಧ್ಯಕ್ಷರೆ, ಮೈಸೂರಿನ ಕೃಷ್ಣರಾಜೇಂದ್ರ ಮಿಲ್ ಮುಚ್ಚಿ ಎರಡೂವರೆ ವರ್ಷಗಳಾಯಿತು. ಮೂರು ಸಾವಿರ ಕಾರ್ಮಿಕರು ಕೆಲಸವಿಲ್ಲದೆ ಆಲೆಯುಬೇಕಾದ ಪರಿಸ್ಥಿತಿ ಬಂದಿದೆ. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನವರು, ನಾನು ಮತ್ತು ನೀರೆ ಬೇರೆ ಯೂನಿಯನ್‌ಗಳವರು ಅನೇಕ ಬಾರಿ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಮತ್ತು ಸರ್ಕಾರ ಪರಿಣಾಮಕಾರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಫ್ಯಾಕ್ಟರಿ ತೆಗೆಯಿಸಲು ಪ್ರಯತ್ನ ಮಾಡಬೇಕು, ಕಾರ್ಮಿಕರಿಗೆ ಕೆಲಸ ಸಿಗುವ ಪ್ರಯತ್ನ ಮಾಡಬೇಕು ಎಂದು ಪದೇ ಪದೇ ಹೇಳಿದ್ದೇವೆ. ಸರ್ಕಾರದವರು ಕೂಡ ನಾವು ಅದಷ್ಟು ಪ್ರಯತ್ನ ಮಾಡುತ್ತೇವೆ, ಇನ್ನೇನೂ ಮಾಡುವುದಕ್ಕಾಗುವುದಿಲ್ಲ. ಎಂಬ ಅಭಿಪ್ರಾಯವನ್ನು ಪ್ರತಿಯೊಂದು ಸಾರಿ ವ್ಯಕ್ತ ಪಡಿಸುತ್ತಾ ಬಂದಿದ್ದಾರೆ. ಮಾಲೀಕ, ಸರ್ಕಾರ ಹೇಳುವಂಥ ಯಾವ ತೀರ್ಮಾನಗಳನ್ನೂ ಜಾರಿಗೆ ತರುವುದಕ್ಕೆ ತಯಾರಿಲ್ಲ. ಪರಿಸ್ಥಿತಿ ಹೀಗೇ ಮುಂದುವರೆಯುತ್ತಿದೆ. ಹೀಗಿರುವಾಗ ನಾವೆಲ್ಲಾ ಪಾಡಿದ್ದೇವೆ ಎಂದು ಹೇಳುವುದು ಸರಿಯಾದುದಲ್ಲ. ಸರ್ಕಾರ ಇನ್ನೂ ಕೂಡ ದಿಟ್ಟತನದಿಂದ ನಿಲುವನ್ನು ತೆಗೆದುಕೊಳ್ಳಬೇಕು. ಕರ್ನಾಟಕ ರಿಲೀಫ್ ಅಂಡರ್ ಟೇಕಿಂಗ್ ಆಕ್ಟ್ ಪ್ರಕಾರ ಸರ್ಕಾರವೇ ಮಿಲ್ಲನ್ನು ತೆಗೆದುಕೊಳ್ಳಬೇಕು ಎಂಬ ಅಭಿಪ್ರಾಯವನ್ನೂ ಕೊಟ್ಟಿದ್ದೇವೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಬಂದು ಟೆಕ್ಸ್‌ಟೈಲ್ ಕಾರ್ಪೊರೇಷನ್ ಮಾಡಬೇಕು ಎಂದು ಮನವಿ ಮಾಡಿದ್ದೇವೆ. ಪಂಜಾಬ್‌ರಾಷ್ಟ್ರದಲ್ಲಿ ಯಾವ ರೀತಿಯಾಗಿ ಮಾಡಿದ್ದಾರೋ ಅದೇ ರೀತಿಯಾಗಿ ಮಾಡಿ ಇಂಥ ಮುಚ್ಚಿರುವ ಕಾರ್ಖಾನೆಗಳನ್ನು ನಮ್ಮ ಕಾಲದಲ್ಲಿ

ತೆಗೆದುಕೊಂಡು ಆ ಕಾರ್ಪೊರೇಷನ್ ಮೂಲಕ ನಡೆಸುವ ಬಗ್ಗೆ ಸ್ಪಷ್ಟವಾದ ನಿಲುವನ್ನು ತಾವು ಮುಖ್ಯಮಂತ್ರಿಗಳು ಅಥವಾ ಸಂಬಂಧಪಟ್ಟ ಮಂತ್ರಿಗಳು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಈ ವಿಷಯದಲ್ಲಿ ಸರ್ಕಾರದ ಧೋರಣೆ ಏನು ಎಂಬುದನ್ನೂ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.....ಕೆ. ಆರ್. ಮಿಲ್ ವಿಚಾರವಾಗಿ ಈ ಸದನದಲ್ಲಿ ಚರ್ಚೆಯಾಗಿದೆ. ನಾನು ಮೂರು ಸಾರಿ ಸಭೆ ಕರೆದಿದ್ದೆ. ಮೈಸೂರು ನಗರದ ಸಂಬಂಧಪಟ್ಟ ಶಾಸಕರನ್ನೂ ಸಭೆಗೆ ನಾನು ಆಹ್ವಾನಿಸಿದ್ದೆ. ಅಲ್ಲಿ ಚರ್ಚೆಯಾದ ಮೇಲೆ ಸರ್ಕಾರ ಅನೇಕ ಸವಲತ್ತುಗಳನ್ನು ಮಾಲೀಕರಿಗೆ ಕೊಡುವುದಕ್ಕೆ ಒಪ್ಪಿಕೊಂಡಿತ್ತು. ಆದರೆ ಆಧಾರದ ಮೇಲೆ ಪುನಃ ಕಾರ್ಖಾನೆ ಪ್ರಾರಂಭ ಮಾಡುವ ಬಗ್ಗೆ ಭರವಸೆ ಕೊಟ್ಟಿದ್ದರು. ಆದರೆ ಕೊನೆಗೆ ಅವರು ಪ್ರಾರಂಭ ಮಾಡುವ ಇಚ್ಛೆಯನ್ನು ತೋರಿಸಲಿಲ್ಲ. ಆದ್ದರಿಂದ ಸರ್ಕಾರ ಅವರ ಮೇಲೆ ಕಾನೂನು ಪ್ರಕಾರ ಪ್ರಾಸಿಕ್ಯೂಷನ್ ಮಾಡುವುದಕ್ಕೆ ಕ್ರಮ ಕೈಗೊಂಡಿದೆ. ಕ್ರಿಮಿನಲ್ ಕೇಸ್ ಮಾಡಿದ್ದೇವೆ. ಇಷ್ಟಾದರೂ ಅವರು ಗಿರಣಿ ಪ್ರಾರಂಭ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಹೋದಸಾರಿ ನಾನು ಭರವಸೆ ಕೊಟ್ಟಂತೆ ಈ ಬಗ್ಗೆ ಸಮಗ್ರ ಕಾನೂನು ಮಾಡುವ ಬಗ್ಗೆ ಸರ್ಕಾರ ಈಗಾಗಲೇ ಪ್ರಯತ್ನ ಮಾಡುತ್ತಿದೆ. ಆ ಗಿರಣಿಗಳನ್ನು ರಾಷ್ಟ್ರೀಕರಣ ಮಾಡತಕ್ಕದ್ದು ಅಥವಾ ಕಾರ್ಮಿಕರಿಗೆ ಒಪ್ಪಿಸತಕ್ಕದ್ದು ಅಥವಾ ಕಾರ್ಮಿಕರಿಗೆ ಕೊಡತಕ್ಕದ್ದರ ಬಗ್ಗೆ ಅಧಿಕಾರ ಪಡೆಯತಕ್ಕದ್ದು ನಮ್ಮ ಉದ್ದೇಶವಾಗಿದೆ. ಆದಷ್ಟು ಜಾಗ್ರತೆ ಈ ಮಸೂದೆಯನ್ನು ಇಲ್ಲಿ ಮಂಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೊಂದು ಭರವಸೆ ಕೊಡುತ್ತಿದ್ದೇನೆ. ಮುಖ್ಯಮಂತ್ರಿಗಳ ಜೊತೆಯೂ ಚರ್ಚೆ ಮಾಡಿದ್ದೇನೆ. ಕೊನೆಯದಾಗಿ ಇನ್ನೊಂದು ಸಾರಿ ಪಾಲೀಕರನ್ನು ಕರೆಯುಬೇಕೆಂದು ಯೋಚನೆ ಮಾಡಿದ್ದೇನೆ. ಆ ಸಂಬಂಧಪಟ್ಟ ಶಾಸಕರನ್ನು ಮತ್ತು ಕೃಷ್ಣನ್ ಅವರನ್ನೂ ಕರೆಯುತ್ತೇನೆ ಆದಕ್ಕೂ ಅವರು ಪ್ರಾರಂಭ ಮಾಡದಿದ್ದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

(೪) ಐದು ರೂಪಾಯಿ ಸ್ಟ್ಯಾಂಪ್ ಪೇಪರ್‌ನ ಕೊರತೆಯ ಬಗ್ಗೆ

ಶ್ರೀ ಕೆ.ಎಚ್. ಶ್ರೀನಿವಾಸ್.....''ರಾಜ್ಯಾದ್ಯಂತ ೫ ರೂಪಾಯಿಗಳ ಸ್ಟ್ಯಾಂಪ್ ಪೇಪರಿನ ತೀವ್ರ ಕೊರತೆ ಉಂಟಾಗಿದ್ದು ಈ ಬಗ್ಗೆ ನವೆಂಬರ್ ೫ ರಂದು ಮುಖ್ಯಮಂತ್ರಿಗಳು ನನ್ನ ಪತ್ರಕ್ಕೆ ಉತ್ತರ ನೀಡಿ ಈ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಕೊಳ್ಳಲು ಕಂದಾಯ ಆಯುಕ್ತರಿಗೆ ಸೂಚಿಸಿರುವುದಾಗಿ ತಿಳಿಸಿದ್ದರು. ಆದರೆ ಈವರೆವಿಗೂ ಈ ಬಗ್ಗೆ ಸೂಕ್ತ ಕ್ರಮ ಜರುಗದೆ ಇದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದಲ್ಲದೆ, ಗ್ರಾಮಾಂತರ ಭಾಗದಲ್ಲಿ ತುರ್ತಾಗಿ ಆಗಬೇಕಾಗಿರುವ ವಿದ್ಯುದೀಕರಣ ಮತ್ತು ಕೆಲವು ಕಾಮಗಾರಿಗಳ ಸಂಬಂಧದಲ್ಲಿ ಅಗತ್ಯವಾದ ಕರಾರುಗಳನ್ನು ದೃಢೀಕರಣಗೊಳಿಸಲು ಸಾಧ್ಯವಾಗದೆ, ವಿಪರೀತ ವಿಳಂಬಕ್ಕೆ ಕಾರಣವಾಗಿರುವುದರಿಂದ ರಾಜ್ಯದಲ್ಲಿ ೫ ರೂಪಾಯಿಯ ಛಾಪಾ ಕಾಗದ ಸುಲಭವಾಗಿ ಲಭ್ಯವಾಗುವಂತೆ ಸರಕಾರ ಅಗತ್ಯ ಕ್ರಮ ಕೈಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ''.

ಶ್ರೀ ಎಸ್.ಆರ್.ಬೊಮ್ಮಾಯಿಯವರು ಲಿಖಿತ ಹೇಳಿಕೆಯನ್ನು ಓದಿದರು.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಯವರು).....ಅಧ್ಯಕ್ಷರೆ, ರಾಜ್ಯಾದ್ಯಂತ ೫-೦೦ ರೂಗಳ ಸ್ಟ್ಯಾಂಪ್ ಪೇಪರಿನ ತೀವ್ರ ಕೊರತೆಯಿದ್ದು ನಿವಾರಿಸಲು ದಿನಾಂಕ ೧೫-೧೨-೮೬ರಲ್ಲಿ ಆರು ವಿದ್ಯುಚ್ಛಕ್ತಿ ಚಾಲಿತ ಪ್ರಾಂಕಿಂಗ್ ಯಂತ್ರಗಳನ್ನು ೧೫ ಪೈಸೆಯಿಂದ ರೂ ೯೯.೯೯ರ ವರೆಗೆ ಮುದ್ರಿಸುವ ಯಂತ್ರಗಳನ್ನು ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಸೂಪರಿಂಟೆಂಡೆಂಟ್ ಆಫ್ ಸ್ಟ್ಯಾಂಪ್ಸ್ ವಿಧಾನ ಸೌಧ ಬೆಂಗಳೂರು ಇವರ ಕಛೇರಿಯಲ್ಲಿ ಸ್ಥಾಪಿಸಲಾಗಿದೆ.

ಇದಕ್ಕೂ ಮೊದಲು ಪ್ರತಿ ಜಿಲ್ಲೆಯ ಕೇಂದ್ರ ಉಪ ನೋಂದಣಿ ಕಛೇರಿಗಳಲ್ಲಿ ರೂ.೫೦೦-೦೦ರವರೆಗೆ ಪ್ರಾಂಕಿಂಗ್ ಮಾಡಿಸುವ ಸೌಲಭ್ಯವಿದೆ.

ಇದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ನೇಮಕ ಮಾಡಿ ದಿನಾಂಕ ೧೫-೧೨-೮೬ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ ಹಾಗೂ ಸಾರ್ವಜನಿಕರ ತಿಳುವಳಿಕೆಗಾಗಿ ದಿನಾಂಕ ೧೧-೧೨-೮೬ರಂದು ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮಂಡ್ಯಾಯುಕ್ತರು ಆಯುಕ್ತರು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ. ವಿದ್ಯುಚ್ಛಕ್ತಿ ಚಾಲಿತ ಪ್ರಾಂಕಿಂಗ್ ಯಂತ್ರಗಳನ್ನು ಜಾರಿಗೆ ಬಂದ ನಂತರ, ಛಾಪಾ ಕಾಗದಗಳ ಕೊರತೆ ಸಾಕಷ್ಟು ಕಡಿಮೆಯಾಗಿರುತ್ತದೆ.